(62)

# ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ನಂ.ಕಂ/ಹಬ/ವಿವಾದ/48/2012-13 ದಿ:16-05-2016

ವಾದಿಗಳು ವಿರುದ್ಧ ಪ್ರತಿವಾದಿಗಳು

ಕೆ.ಸಿದ್ದನಗೌಡ ತಂದೆ ಲೇಟ್ ಕೆ.ವಿರುಪಾಕ್ಷಗೌಡ---------------ಕೆ.ಪಾರ್ವತಮ್ಮ ಗಂಡ ಲೇಟ್ ಕೆ.ವಿರುಪಾಕ್ಷಪ್ಪ

ಕೆ.ಸೂಗೂರು ಗ್ರಾಮ. ಕೆ.ಸೂಗೂರು ಗ್ರಾಮ.

ದಾವಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಕೆ.ಸೂಗೂರು | 228/ಸಿ/2 | 2-10 | ಟಿಬಿಪಿ-ತರಿ |
| | | 353/ಡಿಇ/5 | 3-48 | ಖುಷ್ಕಿ |

ಪೀಠಿಕೆ:-

ಸಿರುಗುಪ್ಪ ತಾಲೂಕು ಕೆ.ಸೂಗೂರು ಗ್ರಾಮದ ಸ,ನಂ.228/ಸಿ/2 ವಿ:2-10 ಎಕ್ರೆ ಹಾಗೂ 353/ಡಿಇ/5 ವಿ:3-48 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಕೆ.ವಿರುಪಾಕ್ಷಗೌಡ ತಂದೆ ಸಿದ್ದನಗೌಡ ಇವರ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರು ದಿ:27-06-2011 ರಂದು ಮರಣ ಹೊಂದಿರುವುದರಿಂದ, ವಾರಸುದಾರರು ದಿನಾಂಕ: 27-02-2012 ರಂದು ಮಾಡಿಕೊಂಡ ಪಾಲುವಿಭಾಗ ಪತ್ರ ಮೇರೆಗೆ ಹಕ್ಕು ಪಡೆದ ವಾದಿ ಕೆ.ಸಿದ್ದನಗೌಡ ತಂದೆ ಲೇಟ್ ಕೆ.ವಿರುಪಾಕ್ಷಗೌಡ ಇವರು ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿದ್ದು, ಅದರಂತೆ ಅರ್ಜಿದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ. ಕೆ.ಸೂಗೂರು ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ ಅರ್ಜಿದಾರನ ಚಿಕ್ಕಮ್ಮಳಾದ ಶ್ರೀಮತಿ ಕೆ.ಪಾರ್ವತಮ್ಮ ಗಂಡ ಲೇಟ್ ಕೆ.ವಿರುಪಾಕ್ಷಗೌಡ ಇವರು ಹಕ್ಕು ಬದಲಾವಣೆ ಮಾಡಬಾರದೆಂದು ದಿನಾಂಕ:10-05-2012 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಹ,ಬ.ಸಂಖ್ಯೆ:83/2011-12 ದಿನಾಂಕ:30-06-2012 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:03-06-2013 ರಿಂದ 13-04-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ವಾದಿ, ಪ್ರತಿವಾದಿಗಳ ವಾದ ಆಲಿಸಲಾಯಿತು. ಅರ್ಜಿದಾರರ ಹೇಳಿಕೆ ಪ್ರಕಾರ ಸದ್ರಿ ಜಮೀನು ತಮ್ಮ ತಂದೆಯ ಹೆಸರಿಗೆ ಇದ್ದು, ಹಾಲಿ ತನ್ನ ತಂದೆ ಮರಣ ಹೊಂದಿರುವುದರಿಂದ ಮತ್ತು ದಿನಾಂಕ:27-02-2012 ರಂದು ಮಾಡಿಕೊಂಡ ಪಾಲುವಿಭಾಗ ಪತ್ರ ಮೇರೆಗೆ ತನ್ನ ಹೆಸರಿಗೆ ಪಟ್ಟಾ ಬದಲಾವಣೆ ಮಾಡಲು ಕೋರಿರುತ್ತಾರೆ.

60

ಪ್ರತಿವಾದಿಯು ದಾವಾ ಆಸ್ತಿ ಸ,ನಂ.ಗಳ ಪೈಕಿ 353/ಡಿಇ/5 ವಿ:3-48 ಎಕ್ರೆ ಜಮೀನನ್ನು ತನ್ನ ಜೀವನಾಂಶಕ್ಕೆ ಅಗ್ರಿಮೆಂಟ್ ಬರೆದುಕೊಟ್ಟಿದ್ದು, ಸದ್ರಿ ಜಮೀನನ್ನು ಹಕ್ಕು ಬದಲಾವಣೆ ಮಾಡಬಾರದೆಂದು ಕೋರಿರುತ್ತಾರೆ. ನಂತರದಲ್ಲಿ ಸದ್ರಿ ಪ್ರತಿವಾದಿಯಾದ ಕೆ.ಪಾರ್ವತಮ್ಮ ಇವರಿಗೆ ಹಿರೇಹಾಳು ಗ್ರಾಮ ಸ,ನಂ.75/1 ವಿ:2-00 ಎಕ್ರೆ ಜಮೀನನ್ನು ಬಿಟ್ಟುಕೊಡಲು ಒಪ್ಪಿದ್ದು, ಉಭಯತರೂ ಊರಿನ ಹಿರಿಯರ ಸಮಕ್ಷಮದಲ್ಲಿ ರಾಜೀಯಾಗಿದ್ದು, ಸದ್ರಿ ಗ್ರಾಮದ ಸ,ನಂ.75/1 ವಿ:2-00 ಎಕ್ರೆ ಜಮೀನು ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಆದ ನಂತರ ತಕರಾರನ್ನು ವಾಪಾಸು ಪಡೆಯುವುದಾಗಿ ತಿಳಿಸಿದ ಪ್ರಯುಕ್ತ ಕಾಲಾವಕಾಶ ನೀಡಲಾಯಿತು.

ತದನಂತರ ಕರೂರು ಹೋಬಳಿ ಹಿರೇಹಾಳು ಗ್ರಾಮ ಸ,ನಂ.75/1 ವಿ:2-00 ಎಕ್ರೆ ಜಮೀನು ಕಂದಾಯ ನಿರೀಕ್ಷಕರು ಕರೂರು ಇವರ ಹಕ್ಕು ಬದಲಾವಣೆ ಸಂಖ್ಯೆ:10/2015-16 ದಿ:11-12-2015 ರ ಪ್ರಕಾರ ಕೆ.ಪಾರ್ವತಮ್ಮ ಗಂಡ ಲೇಟ್ ವಿರುಪಾಕ್ಷಗೌಡ ಹೆಸರಿಗೆ ಹಕ್ಕು ಬದಲಾವಣೆ ಆಗಿರುವ ಪಹಣಿಯನ್ನು ಮತ್ತು ದಿ:14-3-2016 ರಂದು ನೋಟರಿ ಸಮಕ್ಷಮ ಪ್ರಮಾಣೀಕರಿಸಿದ ಅಫಿಡೆವಿಟ್‌ನ್ನು ಹಾಜರುಪಡಿಸಿ, ತನ್ನ ಭಾಗಕ್ಕೆ ಹಿರೇಹಾಳು ಗ್ರಾಮ ಸ,ನಂ.75/1 ವಿ:2-00 ಎಕ್ರೆ ಜಮೀನು ಪ್ರಸ್ತುತ ಹಕ್ಕುಬದಲಾವಣೆ ಆಗಿರುವುದರಿಂದ, ತಾನು ಹಿಂದೆ ಸಲ್ಲಿಸಿದ ತಕರಾರನ್ನು ವಾಪಾಸು ಪಡೆದಿರುವುದಾಗಿ ದಾಖಲೆ ಹಾಜರುಪಡಿಸಿರುತ್ತಾರೆ.

ಆದ್ದರಿಂದ ಸಿರುಗುಪ್ಪ ತಾಲೂಕು ಕೆ.ಸೂಗೂರು ಗ್ರಾಮದ ಸ,ನಂ. 228/ಸಿ/2 ವಿ:2-10 ಎಕ್ರೆ ಹಾಗೂ 353/ಡಿಇ/5 ವಿ:3-48 ಎಕ್ರೆ ಜಮೀನು ದಿನಾಂಕ:27-02-2012 ರಂದು ಮಾಡಿಕೊಂಡ ಪಾಲುವಿಭಾಗ ಪತ್ರ ಮೇರೆಗೆ ಹಕ್ಕು ಪಡೆದ ವಾದಿ ಕೆ.ಸಿದ್ದನಗೌಡ ತಂದೆ ಲೇಟ್ ಕೆ.ವಿರುಪಾಕ್ಷಗೌಡ ಇವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/48/2012-13** **ದಿ:16-05-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಕೆ.ಸೂಗೂರು ಗ್ರಾಮದ ಸ,ನಂ. 228/ಸಿ/2 ವಿ:2-10 ಎಕ್ರೆ ಹಾಗೂ 353/ಡಿಇ/5 ವಿ:3-48 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಕೆ.ವಿರುಪಾಕ್ಷಗೌಡ ತಂದೆ ಸಿದ್ದನಗೌಡ ಇವರ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರು ದಿ:27-06-2011 ರಂದು ಮರಣ ಹೊಂದಿರುವುದರಿಂದ, ವಾರಸುದಾರರು ದಿ:27-02-2012 ರಂದು ಮಾಡಿಕೊಂಡ ಪಾಲುವಿಭಾಗ ಪತ್ರ ಮೇರೆಗೆ ಹಕ್ಕು ಪಡೆದ ವಾದಿ ಕೆ.ಸಿದ್ದನಗೌಡ ತಂದೆ ಲೇಟ್ ಕೆ.ವಿರುಪಾಕ್ಷಗೌಡ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:16-05-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

M. Leela

**ತಹಶೀಲ್ದಾರರು,ಸಿರುಗುಪ್ಪ**

ಕರ್ನಾಟಕ ಸರ್ಕಾರ
ಸಿರುಗುಪ್ಪ
ತಹಶೀಲ್ದಾರರವರ ನ್ಯಾಯಾಲಯ

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ